**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 31–08–2017**

# ಪತ್ರಿಕಾ ಆಮಂತ್ರಣ

**1. ಬೆಂಗಳೂರು ಬೌಲ್ಡರಿಂಗ್ ಚಾಂಪಿಯನ್‌ಶಿಫ್ – 2017 ಕಾರ್ಯಕ್ರಮ ಉದ್ಘಾಟನೆ:**

ದಿನಾಂಕ: 01–09–2017, ಶುಕ್ರವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ.
ಸ್ಥಳ: ಕೋರಮಂಗಲ ಒಳಾಂಗಣ ಕ್ರಿಡಾಂಗಣ, ಕೋರಮಂಗಲ, ಬೆಂಗಳೂರು.

**2. ಪತ್ರಿಕಾಗೋಷ್ಠಿ:**

ಐ.ಐ.ಎಚ್.ಆರ್ ಸಂಸ್ಥೆಯ ಸುವರ್ಣ ಮಹೋತ್ಸವ ಹಾಗೂ ಅಂತಾರಾಷ್ಟ್ರೀಯ ವಿಚಾರಸಂಕಿರಣದ ಕುರಿತು.

ದಿನಾಂಕ: 1–09–2017, ಶುಕ್ರವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ಐ.ಐ.ಹೆಚ್.ಆರ್. ಸಂಸ್ಥೆ, ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560 089.

3. ಕೃಷಿ ಆದಾಯವನ್ನು 2022 ರೊಳಗೆ ದ್ವಿಗುಣ ಮಾಡಲು "ಸಂಕಲ್ಪದಿಂದ ಸಿದ್ಧಿ" ಕಾರ್ಯಕ್ರಮ:

ಉದ್ಘಾಟನೆ:
ಅನಂತಕುಮಾರ್,
ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರ ಸಚಿವರು, ಭಾರತ ಸರ್ಕಾರ.

ಅಧ್ಯಕ್ಷತೆ:
ಡಾ. ಹೆಚ್. ಶಿವಣ್ಣ, ಕುಲಪತಿಗಳು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ದಿನಾಂಕ: 1–09–2017, ಶುಕ್ರವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಕುವೆಂಪು ಕನ್ನಡ ಸಭಾಂಗಣ, ಜಿ.ಕೆ.ವಿ.ಕೆ. ಬೆಂಗಳೂರು.

ವಿಶೇಷ ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 10.00 ಗಂಟೆಗೆ ನಗರದ ಕಬ್ಬನ್ ಉದ್ಯಾನವನದಲ್ಲಿರುವ ಪ್ರೆಸ್ ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.

ಸಂಪರ್ಕ: ಡಾ. ಕೆ. ಶಿರಾಮು, ಪ್ರಾಧ್ಯಾಪಕರು ಹಾಗೂ ಹಿರಿಯ ವಾರ್ತಾತಜ್ಞರು,
ಮೊಬೈಲ್ ಸಂಖ್ಯೆ 9972035456

**<u>ಪತ್ರಿಕಾ ಪ್ರಕಟಣೆ</u>**

ಸಂಖ್ಯೆ 118/118

## ಸೆಪ್ಟಂಬರ್ 1 ಮತ್ತು 2 ರಂದು
## ಬೆಂಗಳೂರು ಬೌಲ್ಡರಿಂಗ್ ಚಾಂಪಿಯನ್‌ಶಿಫ್ – 2017

**ಬೆಂಗಳೂರು, ಆ. 30:** **(ಕರ್ನಾಟಕ ವಾರ್ತೆ)**

**ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಂಗ ಸಂಸ್ಥೆಯಾದ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (ಜೇತನಾ), ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಹಾಗೂ ಭಾರತೀಯ ಪರ್ವತಾರೋಹಣ ಸಂಸ್ಥೆ (IMF) ಸಹಯೋಗದಲ್ಲಿ ಕರ್ನಾಟಕ ಸರ್ಕಾರದವತಿಯಿಂದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಇದೇ ಸೆಪ್ಟಂಬರ್ 1 ಹಾಗೂ 2 ರಂದು ಪ್ರಥಮ ಬಾರಿಗೆ ಬೆಂಗಳೂರು ಬೌಲ್ಡರಿಂಗ್ ಚಾಂಪಿಯನ್‌ಶಿಫ್ – 2017 ಆಯೋಜಿಸಲಾಗಿದೆ.**

**ಬೆಂಗಳೂರು ನಗರವನ್ನು ಆರೋಹಣ ಕ್ರೀಡೆಯಲ್ಲಿ ಪ್ರಮುಖ ಕೇಂದ್ರವನ್ನಾಗಿ ಮಾರ್ಪಾಡು ಮಾಡುವ ನಿಟ್ಟಿನಲ್ಲಿ ಈ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟವನ್ನು ಅಂತರತಾಷ್ಟ್ರೀಯ ಕ್ರೀಡಾರೋಹಣ ಸಂಸ್ಥೆ (International Federation of Sports Climbing) – IFSC ಮಾನದಂಡದಂತೆ ಸಂಘಟಿಸುತ್ತಿದ್ದು, ಸುಮಾರು 12 ವಿದೇಶಿ ಕ್ರೀಡಾಪಟುಗಳು ಸೇರಿದಂತೆ ದೇಶದ ಅತ್ಯುತ್ತಮ ಆರೋಹಣ ಕ್ರೀಡಾಪಟುಗಳು ಒಂದೇ ವೇದಿಕೆಯಡಿಯಲ್ಲಿ ಸ್ಪರ್ಧಿಸಲಿದ್ದಾರೆ.**

**2020 ರ ಒಲಂಪಿಕ್‌ನಲ್ಲಿ ಆರೋಹಣ ಕ್ರೀಡೆಯು ಅಧಿಕೃತ ಕ್ರೀಡೆಯಾಗಿ ಸೇರ್ಪಡೆಯಾಗಿದ್ದು, ಈ ಕ್ರೀಡಾಕೂಟವು ಯುವ ಕ್ರೀಡಾಪಟುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಭವಿಷ್ಯದಲ್ಲಿ ಉತ್ತಮ ಕ್ರೀಡಾಪಟುಗಳಿಗೆ ಸ್ಪೂರ್ತಿ ನೀಡುವ ಆಶಯದೊಂದಿಗೆ ಈ ಚಾಂಪಿಯನ್‌ಶಿಪ್ ಸಂಘಟಿಸಲಾಗುತ್ತಿದೆ.**

ಬೆಂಗಳೂರು ಬೌಲ್ಡರಿಂಗ್ ಚಾಪಿಯನ್‌ಶಿಫ್ (BBC) ನಿರಂತರವಾಗಿ ಯುವ ಸಮೂಹ ಪಾಲ್ಗೊಳ್ಳುವಂತೆ ಮಾಡಲು ಹಾಗೂ ಭಾಗವಹಿಸಲು ಪ್ರೇರೇಪಣೆ ನೀಡುವ ಹಿನ್ನಲೆಯಲ್ಲಿ ಪ್ರಪ್ರಥಮ ಬಾರಿಗೆ ಈ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಕ್ರೀಡಾಕೂಟವನ್ನು ಮತ್ತಷ್ಟು ಅತ್ಯಾಕರ್ಷಕವಾಗಿ ಮಾಡಲು ಭಾರತೀಯ ಆರೋಹಣ ಸಂಸ್ಥೆಯು (IMF) ದಿನಾಂಕ: 02-09-2017 ರಂದು ಪ್ರಶಸ್ತಿ ವಿಜೇತ ಪರ್ವತಾರೋಹಣದ ಚಲನ ಚಿತ್ರವನ್ನು ಪ್ರದರ್ಶಿಸಲಿದ್ದಾರೆ ಎಂದು ಮಹಾನಿರ್ದೇಶಕರು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಹಾಗೂ ನಿರ್ದೇಶಕರು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುಮಪ್ ಅಗ್ರವಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಖ್ಯೆ 119/119

## ನೂತನ ಸಚಿವರುಗಳಿಗೆ ಅಧಿಕಾರ ಮತ್ತು ಗೋಪ್ಯತಾ ಪ್ರಮಾಣ ವಚನ ಬೋಧನೆ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

**ನೂತನ ಸಚಿವರುಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಸೆಪ್ಟೆಂಬರ್ 1 ರಂದು ಸಂಜೆ 5-00 ಗಂಟೆಗೆ ರಾಜಭವನದ ಗಾಜಿನ ಮನೆಯಲ್ಲಿ ಆಯೋಜಿಸಲಾಗಿದೆ.**

**ಗೌರವಾನ್ವಿತ ರಾಜ್ಯಪಾಲರು ಅಧಿಕಾರ ಮತ್ತು ಗೋಪ್ಯತಾ ಪ್ರಮಾಣ ವಚನ ಉಪದೇಶಿಸುವರು ಎಂದು ಪ್ರಕಟಣೆ ತಿಳಿಸಿದೆ.**

ಎಸ್‌ಎಂ:ಜೆಡಿ:ಜಿಪಿಆರ್.

## ಪದವಿಪೂರ್ವ ಪಠ್ಯಪುಸ್ತಕ ಸಾಕಷ್ಟು ಸಂಖ್ಯೆಯಲ್ಲಿ ಮುದ್ರಣ - ಮಾರಾಟಕ್ಕೆ ಲಭ್ಯ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

**ಪದವಿಪೂರ್ವ ತರಗತಿಗಳ ಪಠ್ಯಪುಸ್ತಕಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮುದ್ರಿಸಿ, ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಜೌಕಾಫ್ ಸಚಿವ ತನ್ವೀರ್ ಸೇಠ್ ಅವರು ತಿಳಿಸಿದ್ದಾರೆ.**

**ಕೆಲವು ಕಡೆಗಳಲ್ಲಿ ಕೊರತೆ ಉಂಟಾಗಿರುವ ಬಗ್ಗೆ ತಮ್ಮ ಗಮನಕ್ಕೆ ಬಂದಿದ್ದು, ಪಠ್ಯಪುಸ್ತಕಗಳ ಅಭಾವ ಇರುವ ಪ್ರದೇಶಗಳಿಗೆ ಪಠ್ಯಪುಸ್ತಕಗಳನ್ನು ಆದ್ಯತೆ ಮೇಲೆ ಒದಗಿಸಲು**

**ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು. ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ಸಚಿವರು ತಿಳಿಸಿದ್ದಾರೆ.**

**ಎಸ್‌ಎಂ:ಜೆಡಿ:ಜಿಪಿಆರ್.**

ಸಂಖ್ಯೆ 120/120

## ಉಚಿತ ಯೋಗ ಶಿಬಿರ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

**ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯ ಯೋಗ ವಿಭಾಗ, ದನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು ಇಲ್ಲಿ ಸಾರ್ವಜನಿಕರಿಗೆ ಉಚಿತ ಯೋಗಾಸನ, ಪ್ರಾಣಾಯಾಮ, ಧ್ಯಾನ ಶಿಬಿರವನ್ನು ಏರ್ಪಡಿಸಲಾಗಿದೆ.**

**ಶಿಬಿರದಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿದ್ದು, ತರಗತಿಗಳು ಸೆಪ್ಟೆಂಬರ್ 1 ರಿಂದ 30 ರವರೆಗೆ ಆಸ್ಪತ್ರೆಯ ಯೋಗಾ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಿಗ್ಗೆ 6.00 ರಿಂದ 7.30 ಗಂಟೆವರೆಗೆ ಹಾಗೂ ಸಂಜೆ 5.30 ರಿಂದ 6.30 ಗಂಟೆವರೆಗೆ ನಡೆಯಲಿದೆ.**

**ಆಸಕ್ತರು ತಮ್ಮ ಹೆಸರುಗಳನ್ನು ಯೋಗ ವಿಭಾಗದಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9845986119 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.**

**ಎಸ್‌ಎಂ:ಜೆಡಿ:ಜಿಪಿಆರ್.**

ಸಂಖ್ಯೆ 121/121

## ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

**ಜವಾಹರ್‌ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ಸೆಪ್ಟೆಂಬರ್ 3 ರಂದು ಭಾನುವಾರ ಸಂಜೆ 6.30 ಗಂಟೆಗೆ ನಗರದ ಶ್ರೀ ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು – 1 ಇಲ್ಲಿ ನಕ್ಷತ್ರ ವೀಕ್ಷಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.**

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ – 2237 9725 / 2226 6084 ಅಥವಾ ಅನ್ನು http//www.taralaya.org/monthly-sky-chart.php ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ 122/122

## ಡಿ.ಎಲ್.ಎಡ್/ಡಿ.ಇಡಿ ಮತ್ತು ಪಿಪಿಟಿ ಪರೀಕ್ಷೆ ಫಲಿತಾಂಶ ಪ್ರಕಟ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಜೂನ್ – 2017 ರ ಮಾಹೆಯಲ್ಲಿ ನಡೆಸಿದ ಪ್ರಥಮ ಡಿ.ಎಲ್.ಎಡ್/ಡಿ.ಇಡಿ, ದ್ವಿತೀಯ ಡಿ.ಇಡಿ ಮತ್ತು ಪಿಪಿಟಿ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ 123/123

## ಅರ್ಹ ಅಭ್ಯರ್ಥಿಗಳ ಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರು (ಚಿತ್ರಕಲಾ ಡಿಪ್ಲೋಮ) 182+48 (ಹೈಕ) ಹುದ್ದೆಗಳಿಗೆ ಮೂಲಕ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಸೆಪ್ಟೆಂಬರ್ 5 ಮತ್ತು 6 ರಂದು ನಡೆಸಲು ತೀರ್ಮಾನಿಸಿದೆ.

ಮೂಲ ದಾಖಲೆಗಳ ಪರಿಶಿಲನೆಗೆ ಅರ್ಹರಾದ ಆಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದು. ಅಭ್ಯರ್ಥಿಗಳು ತಮ್ಮ ರಿಜಿಸ್ಟ್ರೇಷನ್ ನಂ. ನಮೂದಿಸಿ ಆಯೋಗದ ಅಂತರ್ಜಾಲ http://kpsc.kar.nic.in

ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ : 8951107408 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ : 124/124

## ಸೆಪ್ಟೆಂಬರ್ 4ರಂದು ಮೂಲ ದಾಖಲೆಗಳ ಪರಿಶೀಲನೆ

ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇಮಕಾತಿಯ ಸಂಬಂಧ 1:5ರ ಅನುಪಾತದಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ವಿವರಣಾ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಅರಣ್ಯ ಇಲಾಖೆಯ ಪ್ರಧಾನ ಅರಣ್ಯ ಸಂರಕ್ಷಾಧಿಕಾರಿಗಳು ದೈಹಿಕ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆಯ ಪರೀಕ್ಷೆಯನ್ನು ನಡೆಸಿ, ವರದಿ ನೀಡಿರುವ ಆಧಾರದ ಮೇರೆಗೆ ಅರ್ಹ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ: 04–ಸೆಪ್ಟೆಂಬರ್–2017 ರಂದು ನಡೆಸಲಾಗುತ್ತದೆ.

ಅರ್ಹ ಅಭ್ಯರ್ಥಿಗಳಿಗೆ ಸೂಚನಾಪತ್ರವನ್ನು ಪ್ರತ್ಯೇಕವಾಗಿ ರವಾನಿಸಲಾಗಿದೆ. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗಾಗಿ ಆಯೋಗದ ಕೇಂದ್ರ ಕಚೇರಿ, ಉದ್ಯೋಗಸೌಧ, ಬೆಂಗಳೂರು ಇಲ್ಲಿ ಸೂಚಿತ ದಿನಾಂಕ ಹಾಗೂ ಸಮಯದಂದು ತಪ್ಪದೇ ಹಾಜರಾಗಬೇಕು.

ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರ ಸ್ವೀಕೃತವಾಗದಿದ್ದಲ್ಲಿ ಸಂಬಂಧಿತ ದಾಖಲೆಗಳೊಂದಿ ಕೇಂದ್ರ ಕಚೇರಿಯನ್ನು ಮೂಲ ದಾಖಲೆಗಳ ಪರಿಶೀಲನೆಗೆ ನಿಗದಿಪಡಿಸಿರುವ ದಿನಾಂಕದೊಳಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ : 125/125

**ಉತ್ತಮ ಗುಣಮಟ್ಟದ ಔಷಧವಲ್ಲವೆಂದು**
**ಔಷಧ ಪರೀಕ್ಷಾ ಪ್ರಯೋಗಾಲಯದಿಂದ ಘೋಷಣೆ**

ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)

ಸರ್ಕಾರಿ ವಿಶ್ಲೇಷಕರು, ಔಷಧ ಪ್ರಯೋಗಾಲಯ, ಬೆಂಗಳೂರು ಇವರು ಹಲವು ಔಷಧಿಗಳನ್ನು ಉತ್ತಮ ಗುಣಮಟ್ಟದ್ದಲ್ಲವೆಂದು ಘೋಷಿಸಿರುತ್ತಾರೆ ಎಂದು ಔಷಧ ನಿಯಂತ್ರಣ ಇಲಾಖೆಯ ಔಷಧ ನಿಯಂತ್ರಕರಾದ ಭಾಗೋಜಿ ಟಿ. ಖಾನಾಪುರೆ ಅವರು ತಿಳಿಸಿದ್ದಾರೆ.

ಕಾಲ್ಬೋಕ್ಸ್ –ವಿ ಟ್ಯಾಬ್ಲೆಟ್ಸ್ (ಕ್ಯಾಲ್ಸಿಯಂ ಸಿಟ್ರೇಟ್, ವಿಟಮಿನ್ ಡಿ3, ಮೆಗ್ನೀಸಿಯಂ ಮತ್ತು ಜಿಂಕ್ ಟ್ಯಾಬ್ಲೆಟ್ಸ್), ಸ್ಪೆಲ್ಕಾನ್ ಆಂಟಿಸೆಪ್ಟಿಕ್ ಸೋಪ್, ಪೆಂಟಾಜೋಲ್–40 (ಪೆಂಟಪ್ರಜಲ್ ಟ್ಯಾಬ್ಲೆಟ್ಸ್ ಐಪಿ 40 ಎಂಜಿ), ಫೆಕ್ಷಿವ್–200 (ಆಫ್ಲೋಕ್ಸಾಸಿನ್ ಟ್ಯಾಬ್ಲೆಟ್ಸ್ ಐಪಿ), ಪ್ಯಾಂಟಿನ್ (ಪೆಂಟಪ್ರಜಲ್ ಗ್ಯಾಸ್ಟ್ರೊ–ರೆಸಿಸ್ಟೆಂಟ್ ಟ್ಯಾಬ್ಲೆಟ್ಸ್ ಐಪಿ 40 ಎಂಜಿ), ರಬಿಪ್ಲಸ್ (ರಬಿಪ್ರಜ್ಲ ಸೋಡಿಯಂ ಇಸಿ ಕ್ಯಾಪ್ಸೂಲ್ಸ್), 6–ಟಿಜಿ 40 ಎಂಜಿ (ತಿಯೋಗುನಿನ್ ಟ್ಯಾಬ್ಲೆಟ್ಸ್ ಯುಎಸ್‌ಪಿ, ಜೋವಾಂಟ–40 (ಪೆಂಟಪ್ರಜಲ್ ಎಂಟರಿಕ್ ಕೊಟೆಡ್ ಬ್ಯಾಬ್ಲೆಟ್ಸ್ ಐಪ 40 ಎಂಜಿ) ಹಾಗೂ ಪಿಯೆಡ್ –40 ಪೆಂಟಪ್ರಜಲ್ ಟ್ಯಾಬ್ಲೆಟ್ಸ್ ಐಪಿ). ಪೆಟಾಲೈಫ್–40 (ಪೆಂಟಪ್ರಜಲ್ ಟ್ಯಾಬ್ಲೆಟ್ಸ್ ಐಪಿ 40 ಎಂ.ಜಿ.)

ಪೆಂಟಪ್ರಜಲ್ ಟ್ಯಾಬ್ಲೆಟ್ಸ್ ಐಪಿ 40 ಎಂಜಿ, ಒಮಿಪ್ರಜಲ್ ಕ್ಯಾಪ್ಸೂಲ್ಸ್ ಐಪಿ, ಓರ್ಸಿಪ್ಯಾನ್–40 (ಪೆಂಟಪ್ರಜಲ್ ಸೋಡಿಯಂ ಟ್ಯಾಬ್ಲೆಟ್ಸ್ ಐಪಿ), ಒಪ್ಪಿಟ್ (ಪೆಂಟಪ್ರಜಲ್ ಟ್ಯಾಬ್ಲೆಟ್ಸ್ ಐಪಿ), ಲೊಪ್ರಮೆಡ್ (ಲೊಪಿರಮೈಡ್ ಹೈಡ್ರೋಕ್ಲೋರೈಡ್ ಟ್ಯಾಬ್ಲೆಟ್ಸ್ ಐಪಿ 2 ಎಂಜಿ), ಪ್ಯಾನ್‌ಪಿಲ್ –40 (ಪೆಂಟಪ್ರಜಲ್ ಟ್ಯಾಬ್ಲೆಟ್ಸ್ 40 ಎಂಜಿ), ಮಿಕೊಬ್ಲೆಂಡ್ (ಕ್ಯಾಪ್ಸೂಲ್ಸ್ ಆಫ್ ಆಲ್ಫಾ ಲಿಪೊಯಿಕ್ ಆಸಿಡ್, ಮಿತ್ಯಲ್‌ಕೊಬಲಮಿನ್, ವಿಟಮಿನ್ ಮತ್ತು ಮಿನರಲ್), ವಿಜಿ–ಫೋರ್ಸ್ (ಕಾಂಡೋಮ್), ಪ್ಯಾರರಿಫ್–500 (ಪ್ಯಾರಸಿಟಮಲ್ ಟ್ಯಾಬ್ಲೆಟ್ಸ್ ಐಪಿ 500 ಎಂಜಿ)

ಈ ಔಷಧಿಗಳನ್ನು ಔಷಧ ವ್ಯಾಪರಿಗಳು, ಸಗಟು ಔಷಧ ಮಾರಾಟಗಾರರು, ವೈದ್ಯರು, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂನವರು ದಾಸ್ತಾನು ಮಾಡುವುದಾಗಲಿ, ಮಾರಾಟ ಮಾಡುವುದಾಗಲಿ ಅಥವಾ ಉಪಯೋಗಿಸುವುದಾಗಲಿ ಮಾಡಬಾರದೆಂದು ಸೂಚಿಸಲಾಗಿದೆ.

ಯಾರಾದರೂ ಸದರಿ ಔಷಧಿಗಳ ದಾಸ್ತಾನನ್ನು ಹೊಂದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಕ್ಷೇತ್ರದ ಔಷಧ ಪರಿವೀಕ್ಷಕರು ಅಥವಾ ಸಹಾಯಕ ಔಷಧ ನಿಯಂತ್ರಕರ ಗಮನಕ್ಕೆ ತರಲು ಸೂಚಿಸಿದೆ ಅಲ್ಲದೇ ಸಾರ್ವಜನಿಕರು ಈ ಔಷಧಗಳನ್ನು ಉಪಯೋಗಿಸಬಾರದೆಂದು ಔಷಧ ನಿಯಂತ್ರಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ: 126/126

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸೆಪ್ಟೆಂಬರ್ 1 ರಂದು ಬಕ್ರೀದ್ ಹಬ್ಬದ ರಜೆ ಘೋಷಣೆ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಸೆಪ್ಟೆಂಬರ್ 1 ರಂದು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಸೆಪ್ಟೆಂಬರ್ 2 ರ ಬದಲಾಗಿ ಸೆಪ್ಟೆಂಬರ್ 1 ರಂದು ಬಕ್ರೀದ್ ರಜೆಯನ್ನು ಘೋಷಿಸಿ ರಾಜ್ಯ ಸರ್ಕಾರ ಆದೇಶವನ್ನು ಹೊರಡಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ: 127/127

## ಮುಂದಿನ ವರ್ಷದ ಅಕ್ಟೋಬರ್ 2 ರ ವೇಳೆಗೆ ಬಯಲು ಬಹಿರ್ದೆಸೆ ಮುಕ್ತ ರಾಜ್ಯವಾಗಬೇಕು – ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು, ಆ. 31 (ಕರ್ನಾಟಕ ವಾರ್ತೆ)**

ಮುಂದಿನ ವರ್ಷದ ಅಕ್ಟೋಬರ್ 2 ರ ವೇಳೆಗೆ ನಗರ, ಸ್ಥಳೀಯ ಸಂಸ್ಥೆಗಳು ಬಯಲು ಬಹಿರ್ದೆಸೆ ಮುಕ್ತ ಆಗಬೇಕು. ಇದು ಸರ್ಕಾರದ ಉದ್ದೇಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ನಗರಾಭಿವೃದ್ಧಿ ಇಲಾಖೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಇಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು ಬಯಲು ಶೌಚಾಲಯದ ವ್ಯವಸ್ಥೆ ಈ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರಿಂದ ರೋಗರುಜಿನಗಳು ಹೆಚ್ಚುತ್ತವೆ.

ಜೊತೆಗೆ ಪರಿಸರವು ಮಾಲಿನ್ಯವಾಗುತ್ತದೆ. ಆದ್ದರಿಂದ ಬಯಲು ಬಹಿರ್ದೆಸೆ ಮುಕ್ತ ಪ್ರದೇಶಗಳನ್ನಾಗಿ ಮಾಡುವುದು ಸರ್ಕಾರದ ಉದ್ದೇಶವಾಗಿದೆ. ಅದಲ್ಲದೆ ಪ್ರತಿಯೊಬ್ಬರಿಗೂ ಶೌಚಾಲಯ ವ್ಯವಸ್ಥೆ ಕಲ್ಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ನಗರ ಪ್ರದೇಶಗಳಲ್ಲಿ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅದಕ್ಕೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಜವಾಬ್ಧಾರಿಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಂಡಿದೆ. ಅಧಿಕಾರಿಗಳು ಸರ್ಕಾರದ ಈ ಮಹತ್ವದ ಯೋಜನೆ ಸಫಲವಾಗುವಂತೆ ಆಧ್ಯತೆ ಮೇಲೆ ಕರ್ತವ್ಯ ನಿರ್ವಹಿಸಬೇಕು. ಸರ್ಕಾರ ಜನಪರ ಯೋಜನೆಗಳನ್ನು ರೂಪಿಸುತ್ತದೆ. ಕಾಮಗಾರಿಗಳು ವಿಳಂಬವಾದಲ್ಲಿ ಹಣಕಾಸಿನ ಹೊರೆ ಹೆಚ್ಚಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಕಾಲಮಿತಿ ಅಳವಡಿಸಿಕೊಂಡು ಕೆಲಸಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸ್ವಚ್ಚ ಭಾರತ ಯೋಜನೆ ಹೊಸದೇನಲ್ಲ ಹಿಂದೆ ನಿರ್ಮಲ ಭಾರತ ಎಂಬ ಹೆಸರಿನಲ್ಲಿ ಕೆಲಸ ನಡೆಯುತ್ತಿತ್ತು. ಸ್ಮಾರ್ಟ್ ಸಿಟಿ ಯೋಜನೆಗೆ ಜಾಗ ಮತ್ತು ಹೆಚ್ಚಿನ ಅನುದಾನವನ್ನು ನಮ್ಮ ಸರ್ಕಾರ ಕೊಡುತ್ತಿದೆ ಎಂದರು.

ನಗರೋತ್ಥಾನ ಯೋಜನೆಯನ್ನು ಸರ್ಕಾರ ಮೂರು ಹಂತಗಳಲ್ಲಿ ಕೈಗೆತ್ತಿಕೊಂಡಿದ್ದು ಮೊದಲ ಹಂತದಲ್ಲಿ 1454 ಕೋಟಿ ರೂ. 2ನೇ ಹಂತದ ಯೋಜನೆಗೆ 2060 ಕೋಟಿ ರೂ. ಹಣ ಬಿಡುಗಡೆಮಾಡಿದ್ದು ಎರಡು ಹಂತದ ಕಾಮಗಾರಿಗಳು ಪೂರ್ಣಗೊಂಡಿದ್ದು ಮೂರನೇ ಹಂತದ ಯೋಜನೆಗೆ 2900 ಕೋಟಿ ರೂ. ಬಿಡುಗಡೆಮಾಡಿದ್ದು, ಕೂಡಲೇ ಕೆಲಸ ಆರಂಭಿಸುವಂತೆ ಸೂಚನೆ ನೀಡಿದ ಮುಖ್ಯಮಂತ್ರಿ ಅವರು ಗ್ರಾಮೀಣ ಪ್ರದೇಶಗಳಲ್ಲಿ 55 ಲಕ್ಷ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 4 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗುವುದು ಎಂದರು.

ರಾಜ್ಯದಲ್ಲಿ ದಿನೇ ದಿನೇ ನಗರೀಕರಣ ಜಾಸ್ತಿಯಾಗುತ್ತಿದ್ದು, ನಗರಕ್ಕೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಅಂತಹ ಜನರಿಗೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಸರ್ಕಾರ ಆದ್ಯತೆ ಮೇಲೆ ಕೆಲಸ ಮಾಡುತ್ತಿದೆ ಎಂದು ಪೌರಾಡಳಿತ ಸಚಿವ ಈಶ್ವರ್ ಖಂಡ್ರೆ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ನಗರಾಭಿವೃದ್ಧಿ ಸಚಿವ ಆರ್. ರೋಷನ್ ಬೇಗ್ ಅವರು ವಹಿಸಿದ್ದರು. ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್, ಶಾಸಕರುಗಳು, ನಗರ, ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಚುನಾಯಿತ ಜನ ಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಮೊದಲಿಗೆ ಸ್ವಾಗತಿಸಿದರು. ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಾದ ಡಾ. ವಿಶಾಲ್ ವಂದಿಸಿದರು.

ಎಸ್‌ಎಂ:ಜೆಡಿ:ಜಿಪಿಆರ್.